ಹೋಗಿ ನೂರು ನೂರು ರೂಪಾಯಿಗಳ ನೋಟುಗಳನ್ನು ಹಿಡಿದುಕೊಂಡು ಧಡ ಧಡ ಅಂಗಳಕ್ಕೆ ಬಂದನಂತೆ. ''ಸಿಟ್ಟು ಮಾಡಿಕೊಳ್ಳಬೇಡ, ನಿನ್ನನ್ನು ಕಳ್ಳನೆಂದು ತಿಳಿದಿಲ್ಲ, ಏಕೋ ನಿನ್ನ ಮಗ ನನ್ನ ಮಗನ ಹಾಗೇ ಕಂಡ. ಅಷ್ಟಕ್ಕೇ ಎಂದು ತಿಳಿ. ಇದು ತಗೋ, ಈ ಇಬ್ಬರೂ ಮಕ್ಕಳನ್ನು ಚೆನ್ನಾಗಿ ನೋಡಿಕೋ. ಕಷ್ಟದ ಪ್ರಸಂಗ ಬಂದರೆ ನನ್ನನ್ನು ಬಂದು ಕಾಣು. ಮನಸ್ಸಿಗೆ ಬಂದರೆ ಮಾತ್ರ ಇತ್ತ ಕಡೆಗೆ ಬಂದಾಗಲೆಲ್ಲಾ ಬಾ. ಜಬರ್ದಸ್ತಿಯಿಲ್ಲ'' ಎಂದವನೇ ರೂಪಾಯಿಯ ನೋಟುಗಳನ್ನು ಡೊಂಬನ ಕೈಯಲ್ಲಿ ತುರುಕಿ ಮನೆಯ ಒಳಕ್ಕೆ ನಡೆದುಬಿಟ್ಟನಂತೆ. ಐದು ನೋಟುಗಳಾದರೂ ಇರಬೇಕೆಂದು ನೋಡಿದವರ ಅಂದಾಜು. ಆಮೇಲೆ ಮಾತ್ರ ರಾವ್‌ಜೀಭಾಯಿ ಮೊದಲಿನ ಹಾಗೆ ಉಳಿಯಲೇ ಇಲ್ಲ. ಕೆಲವು ದಿನ ನೆರೆಹೊರೆಯವರೊಡನೆ ಮಾತನಾಡುವುದನ್ನೇ ನಿಲ್ಲಿಸಿದನಂತೆ. ಡೊಂಬ ಮತ್ತೆ ಕಾಣಿಸಿಕೊಳ್ಳಲೇ ಇಲ್ಲ. ಆಗ ಮಾತ್ರ ನೆರೆಹೊರೆಯವರಿಗೇ ತಳಮಳ, ಆ ಹುಡುಗ ನಿಜಕ್ಕೂ ಇವನ ಮಗನೇ ಇದ್ದರೂ ಇದ್ದಿರಬಹುದೆಂದು! ಇಲ್ಲವಾದರೆ ಹಣದ ಆಸೆಗಾದರೂ ಮತ್ತೆ ಬರದೇ ಇರುತ್ತಿರಲಿಲ್ಲ. ರಾವ್‌ಜೀಭಾಯಿ ತಾನಾಗಿಯೇ ಯಾರ ಇದಿರಿಗೂ ಆ ಮಗನ ಬಗ್ಗೆ ಇನ್ನೊಮ್ಮೆ ಚಕಾರವೆತ್ತಲಿಲ್ಲ. ಒಮ್ಮೆ ಮಾತ್ರ ಹೆಂಡತಿಯ ಇದಿರು, 'ಡೊಂಬನಾದರೂ ಅಡ್ಡಿಯಿಲ್ಲ' ಎಂದಿದ್ದನಂತೆ. ತಾನು ಭಯಪಟ್ಟಂತೆ ಕರುಡನಾಗಿಲ್ಲ, ಹೆಳವನಾಗಿಲ್ಲ ಎಂದುಕೊಂಡು ಒಳಗೊಳಗೇ ಒಂದು ಬಗೆಯ ಸಮಾಧಾನದಿಂದಲೇ ಇದ್ದವನ ಹಾಗೆ ತೋರುತ್ತಿದ್ದನಂತೆ. ಇದೆಲ್ಲ ರಾವ್‌ಜೀಭಾಯಿಯ ಮಕ್ಕಳಿಗೆ ದೊಡ್ಡವರಾದ ಮೇಲೆ, ಅಮ್ಮನಿಂದ, ನೆರೆಹೊರೆಯವರಿಂದ ತಿಳಿದದ್ದು. ಈ ಡೊಂಬನ ಪ್ರಕರಣ ನಡೆದು ಈಗ ಮುವ್ವತ್ತು ವರ್ಷಗಳ ಮೇಲೇ ಆಗಿರಬೇಕು. ಮಧ್ಯಾಹ್ನ ಕಂಡ ಹುಡುಗ ಮತ್ತೆ ಆಗಿನ ನೆನಪು ಕೆರಳಿಸಿದನೋ, ಯಾರಿಗೆ ಗೊತ್ತು? ಮನುಷ್ಯ ಜೀವನದ ವೈಚಿತ್ರ್ಯವನ್ನು ಬಲ್ಲವರಾರು! ಮುದುಕನಿಗೆ ಈ ನಡುವಿನ ಕಾಲಮಾನ ಸಂಪೂರ್ಣವಾಗಿ ಮರೆತೇ ಹೋಗಿದ್ದರೂ ಆಶ್ಚರ್ಯವಲ್ಲ! ತನ್ನ ಬಾಯಿಂದ ಹೊರಟ ಮಾತುಗಳಿಂದ ಸ್ವತಃ ಜಾಧವನಿಗೇ ದಿಗಿಲಾಗಿತ್ತು. ಪೊಲೀಸ್ ಖಾತೆಯನ್ನು ಸೇರಿಕೊಂಡ ಮೇಲೆ ಯಾವ ಒಬ್ಬ ಮನುಷ್ಯ ವ್ಯಕ್ತಿಯ ಬಗೆಗೂ ಇಷ್ಟೊಂದು ಭಾವುಕನಾಗಿರಲಿಲ್ಲ. ಹೀಗೆ ಮಾತನಾಡಿರಲಿಲ್ಲ. ತಾನು ಇಷ್ಟೊಂದು ಮೆತ್ತಗಾದುದಕ್ಕೆ ಮುಂದೆ ಕುಳಿತ ವಯೋವೃದ್ಧರು ಕಾರಣವಾಗಿರಲೂಬಹುದು ಅನ್ನಿಸಿತು. ಜಮಶೇದ–ಫ್ರೇನಿ ಕೂಡ ಜಾಧವ ತಮ್ಮತ್ತ ನೋಡಿದ ರೀತಿಯಿಂದ ತಟ್ಟಿದವರಾಗಿ ಪರಸ್ಪರರತ್ತ ನೋಡಿದರೇ ಹೊರತು ಮಾತನಾಡಲಿಲ್ಲ. ಮಾತನಾಡುವುದು ಸಾಧ್ಯವಾಗಲಿಲ್ಲ. ರಾವ್‌ಜೀಭಾಯಿ ಆಗ ಹೇಳಿದ ಕತೆಯಲ್ಲಿ ಬಂದ ಅಪರಿಚಿತ ನಾಡಿನ ವಿಲಕ್ಷಣ ಹುಡುಗನ ಬಗ್ಗೆ ಹೇಳಲು ಇದು ಸರಿಯಾದ ಸಮಯವೆಂದು ತೋರಿದರೂ ತಾನು ಕೇಳಿದ್ದರ ಬಗೆಗೇ ಸಂಶಯ ಮೂಡಿದಾಗ ಹೇಳುವುದು ಬೇಡ ಅನ್ನಿಸಿತು. ಹೊಟ್ಟೆಯ ಮಕ್ಕಳ ಬಗ್ಗೆ ಕೇಳಿದ ಪ್ರಶ್ನೆಯ ಬಗ್ಗೆ ಹೇಳಬೇಕೆಂದುಕೊಂಡ ಫ್ರೇನಿಗೂ ಕೊನೆಯ ಗಳಿಗೆಯಲ್ಲಿ ಧೈರ್ಯ ಸಾಲದೇ ಹೋಯಿತು. ಆದರೆ ಆ ಪ್ರಶ್ನೆಯ ನೆನಪೇ ಈಗ. ಜಾಧವ ಹೇಳಿದ್ದರ ಹಿನ್ನೆಲೆಯಲ್ಲಿ, ಹಲವು ಅರ್ಥಗಳ ಶ್ರೇಣಿಯನ್ನು ನಿರ್ಮಿಸುತ್ತಿರುವ ಅರಿವಿನಿಂದ ಮೈ ಜುಮ್ ಎಂದು ನವಿರು ಬಿಟ್ಟಿತು. ಆ ಮುದುಕ ಹುಡುಕುತ್ತಿದ್ದುದ್ದು ತನ್ನನ್ನೇ ಆಗಿರಬಹುದಾದ ರೋಮಾಂಚಕಾರಿ ಸಾಧ್ಯತೆಯನ್ನು ಕ್ಷಣಕಾಲ ಬದಿಗೊತ್ತಿ, ಧೋಂಡೂ ಡಾಯನಿಂಗ್ ಟೇಬಲ್ ಮೂಲೆಯಿಂದಲೇ – ''ನೀವು ಏನೇ ಹೇಳಿ ಇನ್‌ಸ್ಪೆಕ್ಟರ್ ಸಾಹೇಬರೇ, ಅವನು ತನ್ನ ಅಣ್ಣನ ಮಗನೆಂದ ಡೊಂಬನೇ ಸುಳ್ಳ. ಹುಡುಗ ಈ ಮುದುಕನ ಮಗನೇ ಹೊರತು ಇನ್ನು ಯಾರೂ ಅಲ್ಲ, ಅವನ ಚಿಂತೆಯಲ್ಲಿ